# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

☎ ೦೮೩೯೪-೨೪೧೩೩೫ ಫ್ಯಾಕ್ಸ್ : ೦೮೩೯೪-೨೪೧೩೩೫, ಇ-ಅಂಚೆ : kannadauniversity@gmail.com


ಕವಿಹಂ:ಕುಸ:ಸಾಮಾನ್ಯ:೨೦೨೦-೨೧ / 460 ದಿನಾಂಕ: ೦೪.೦೫.೨೦೨೦

## ಸುತ್ತೋಲೆ

ವಿಷಯ : ಕೊರೊನಾ ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯದ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ರಜೆಯನ್ನು ಮುಂದುವರಿಸುವ ಹಾಗೂ ಕಚೇರಿ ಕೆಲಸಕ್ಕೆ ಸಿಬ್ಬಂದಿಗಳು ಹಾಜರಾಗಲು ಮಾರ್ಗಸೂಚಿ ಕುರಿತು.

ಉಲ್ಲೇಖ: ೧. ಸರ್ಕಾರದ ಸುತ್ತೋಲೆ ಸಂ. ಸಿಆಸುಇ ೧೨೩ ಡಿಬಿಎಂ ೨೦೨೦(ಭಾಗ) ದಿ. ೦೨.೦೫.೨೦೨೦
೨. ಮಾನ್ಯ ಕುಲಪತಿಯವರ ಅನುಮೋದನೆ ಕಂಡಿಕೆ ೧೧೫, ದಿನಾಂಕ ೦೩.೦೫.೨೦೨೦

ರಾಜ್ಯಾದ್ಯಂತ ಹರಡುತ್ತಿರುವ ಕೊರೊನಾ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ದೃಷ್ಟಿಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆದೇಶದ ಮೇರೆಗೆ ವಿಶ್ವವಿದ್ಯಾಲಯವು ಹೊರಡಿಸಿದ ಸುತ್ತೋಲೆಗಳನ್ನು ಮುಂದುವರೆಸುತ್ತಾ, ಪ್ರಸ್ತುತ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಲಾಕ್‌ಡೌನ್ ಅನ್ನು ದಿನಾಂಕ ೧೭.೦೫.೨೦೨೦ರವರೆಗೆ ವಿಸ್ತರಿಸಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ದಿನಾಂಕ ೧೭.೦೫.೨೦೨೦ರವರೆಗೆ ಅಥವಾ ಮುಂದಿನ ಆದೇಶದವರೆಗೆ ವಿಸ್ತರಿಸಿ ರಜೆಯನ್ನು ಘೋಷಿಸಲಾಗಿದೆ.

ಈ ಕೆಳಕಂಡ ಮಾರ್ಗಸೂಚಿಗಳನ್ವಯ ದಿನಾಂಕ ೦೪.೦೫.೨೦೨೦ರಿಂದ ಅನ್ವಯವಾಗುವಂತೆ ಎಲ್ಲಾ ಆಡಳಿತ ಸಿಬ್ಬಂದಿಗಳು ಹಾಗೂ ಅಧ್ಯಯನ ವಿಭಾಗಗಳು/ ವಿಸ್ತರಣಾ ಕೇಂದ್ರಗಳ ಮುಖ್ಯಸ್ಥರು ಕಚೇರಿ ಕೆಲಸಕ್ಕೆ ಹಾಜರಾಗಲು ಸೂಚಿಸಲಾಗಿದೆ.

೧. ದಿನಾಂಕ ೧೭.೦೫.೨೦೨೦ರವರೆಗೆ ವಿಶ್ವವಿದ್ಯಾಲಯದ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ರಜೆಯನ್ನು ವಿಸ್ತರಿಸಿರುವುದರಿಂದ ಅಧ್ಯಾಪಕರುಗಳು ಆನ್‌ಲೈನ್ ತರಗತಿಗಳನ್ನು ಯಥಾಪ್ರಕಾರ ಮುಂದುವರೆಸಲು ಸೂಚಿಸಲಾಗಿದೆ.

೨. ಉಲ್ಲೇಖ ೧ರಲ್ಲಿಯ ಸರ್ಕಾರದ ಸುತ್ತೋಲೆಯನ್ವಯ ವಿಶ್ವವಿದ್ಯಾಲಯದ ಗ್ರೂಪ್-ಎ, ಗ್ರೂಪ್-ಬಿ ವೃಂದದ ಅಧಿಕಾರಿಗಳು, ಎಲ್ಲಾ ವಿಭಾಗಗಳ ಮುಖ್ಯಸ್ಥರು, ಸಿ ಮತ್ತು ಡಿ ವರ್ಗದ ಎಲ್ಲಾ ಸಿಬ್ಬಂದಿಗಳು ಕಚೇರಿ ಕೆಲಸಕ್ಕೆ ಹಾಜರಾಗತಕ್ಕದ್ದು ಹಾಗೂ ದಿನಾಂಕ ೦೪.೦೫.೨೦೨೦ರಂದು ಕರ್ತವ್ಯಕ್ಕೆ ಹಾಜರಾದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ವಿವರ ಮತ್ತು ದಿ. ೧೭.೦೫.೨೦೨೦ರವರೆಗೆ ಕಾರ್ಯನಿರ್ವಹಿಸಿದವರ ಹಾಜರಾತಿಯನ್ನು ಕುಲಸಚಿವರ ಕಚೇರಿಗೆ ಸಲ್ಲಿಸತಕ್ಕದ್ದು.

೩. ವಿಶ್ವವಿದ್ಯಾಲಯದ ಕೇಂದ್ರ ಸ್ಥಾನ ವ್ಯಾಪ್ತಿ, ಹೊಸಪೇಟೆ ತಾಲೂಕು ಹೊರತುಪಡಿಸಿ ಹೊರಗಿನ ಸ್ಥಳ/ತಾಲೂಕು/ಜಿಲ್ಲೆಗಳಿಂದ ಕಚೇರಿಗೆ ಹಾಜರಾಗುವ ಅಧಿಕಾರಿಗಳು/ಸಿಬ್ಬಂದಿಗಳು ಹಾಜರಾಗುವ ಮುನ್ನ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಿ ಅನುಮತಿ/ನಿಯಮಾನುಸಾರ ಸರ್ಕಾರಿ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದು ಸಂಬಂಧಿಸಿದ ಕಚೇರಿಗೆ ಸಲ್ಲಿಸಿ ಕೆಲಸಕ್ಕೆ ಹಾಜರಾಗತಕ್ಕದ್ದು.

೪. ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಕೊಠಡಿಯಲ್ಲಿ ಇರಿಸಿರುವ ತಮಗೆ ಸಂಬಂಧಿಸಿದ ಪುಸ್ತಕ ಹಾಗೂ ಇತರ ಸಾಮಗ್ರಿಗಳನ್ನು ಹಿಂಪಡೆಯಲು ಬಯಸಿದ್ದಲ್ಲಿ, ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಿ ಅನುಮತಿ/ನಿಯಮಾನುಸಾರ ಸರ್ಕಾರಿ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದು ನಿಲಯಪಾಲಕರಿಗೆ ಸಲ್ಲಿಸಿ ತಮ್ಮ ಸಾಮಗ್ರಿಗಳನ್ನು ಹಿಂಪಡೆಯುವುದು.

೫. ಕೋವಿಡ್-೧೯ ಸಾಂಕ್ರಾಮಿಕ ರೋಗ ಹರಡದಿರುವಂತೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸುವುದರೊಂದಿಗೆ ಕಚೇರಿಯಲ್ಲಿ ಕಾರ್ಯನಿರ್ವಹಿಸುವಾಗ ಮಾಸ್ಕ್ ಧರಿಸುವಿಕೆ, ಸ್ಯಾನಿಟೈಸರ್ ಬಳಸುವುದು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಕಾರಣ, ಸದರಿ ವಿಷಯವನ್ನು ವಿಭಾಗಗಳ ಮುಖ್ಯಸ್ಥರು ತಮ್ಮ ವಿಭಾಗದ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಇವರಿಗೆ

೧. ಎಲ್ಲ ಅಧ್ಯಯನ ಮತ್ತು ಆಡಳಿತ ವಿಭಾಗಗಳ ಮುಖ್ಯಸ್ಥರಿಗೆ-ತಮ್ಮ ವಿಭಾಗದ ಸಿಬ್ಬಂದಿಗಳು ಮತ್ತು ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಿದೆ.

ಮುಂದಿನಪುಟಕ್ಕೆ...